ಓ ಎಸ್ ನಂಃ 325-14
ಪಿ ಡಬ್ಲ್ಯೂ ಃ 1

ದಿಃ 24-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ

38. ಈ ದಾವೆಯಲ್ಲಿ 1 ನೇ ಪ್ರತಿವಾದಿ ಮೋಸದಿಂದ ತಪ್ಪು ವಿಳಾಸ ಕೊಟ್ಟು ನನ್ನ ಹೆಸರಿನಲ್ಲಿರುವ ಆಸ್ತಿಯನ್ನು ಅವರ ಹೆಸರಿನಲ್ಲಿ ಮಾಡಿಕೊಂಡಿದ್ದಾರೆಂದು ಹೇಳಿ ಸಲ್ಲಿಸಿರುತ್ತೇನೆ. 6 ಮತ್ತು 7 ನೇ ಪ್ರತಿವಾದಿಯರನ್ನು ಯಾವ ಉದ್ದೇಶದಿಂದ ಪಕ್ಷಗಾರರನ್ನಾಗಿ ಮಾಡಿದ್ದೇನೆಂದು ನನಗೆ ಗೊತ್ತಾಗುವುದಿಲ್ಲ. ಅವರು ಸಲ್ಲಿಸಿದ ಪ್ರತಿವಾದ ಪತ್ರದ ವಿಚಾರವನ್ನು ಕೂಡಾ ನಾನು ತಿಳಿದುಕೊಂಡಿಲ್ಲ. ಈರಮ್ಮನ ತಂದೆ ಹೆಸರು ನಾಗಣ್ಣ. ನಾಗಣ್ಣರವರು ಮೂಲತಃ ಸೋಲೂರಿನವರು. ಈರಮ್ಮರವರ ತವರು ಮನೆ ಕೂಡಾ ಸೋಲೂರು. ಸದರಿ ನಾಗಣ್ಣರವರು ಸೋಲೂರಿನ ನಿವಾಸಿ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಏನು ದಾಖಲೆ ಕೊಟ್ಟಿದ್ದೇನೆಂದು ನನಗೆ ಗೊತ್ತಾಗುವುದಿಲ್ಲ.

39. ನಾಗಣ್ಣನವರು ಹುಟ್ಟಿ ಬೆಳೆದಿದ್ದು ಎಲ್ಲಿ ಎಂದು ನನಗೆ ಗೊತ್ತಿಲ್ಲ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಯೂರುಡುಗೆರೆ ಸಮೀಪದ ನಾಗೋಜಿಪಾಳ್ಯದ ನಿವಾಸಿ ಅಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ ನಾಗಣ್ಣನವರ ಹೆಸರಿನಲ್ಲಿತ್ತು. ನಾಗಣ್ಣನವರಿಗೆ ಸೇರಿದೆ ಎಂದು ತೋರಿಸುವ ಯಾವ ಮೂಲ ದಾಖಲಾತಿ ತೋರಿಸಿದ್ದೀರ ಅಂದರೆ ಸಾಕ್ಷಿ ಪಡಾ ನಿಂತಿತ್ತು ಹಾಗೂ ವಿಲ್ ನಾಮೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಾಖಲೆ ಮೂಲತಃ ನರಸಿಂಹೇಗೌಡರವರ ಹೆಸರಿನಲ್ಲಿತ್ತು ಅಂದರೆ ಸರಿಯಲ್ಲ. ಸದರಿ ನರಸಿಂಹೇಗೌಡ ಈರಮ್ಮನವರ ಮಾವ ಅಂದರೆ ಸರಿ.

40. ದಾವಾ ಒಂದನೇ ಸ್ವತ್ತಿನ 1982-1983 ನೇ ಸಾಲಿನ ಕೈಬರಹದ ಪಹಣಿಯ ನಕಲನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನರಸಿಂಹೇಗೌಡ ಎಂಬ ಹೆಸರು ನಮೂದು ಇದೆ ಎಂದು ಹೇಳಿದಾಗ ಸಾಕ್ಷಿ ಅದನ್ನು ನೋಡಿ ನರಸಿಂಹೇಗೌಡ ಹಾಗೂ ಪಡಾ ಎಂಬುದಾಗಿ ನಮೂದು ಇದೆ ಎಂದು ನುಡಿಯುತ್ತಾರೆ. ಆದ್ದರಿಂದ ಆ ದಾಖಲೆಯನ್ನು **ನಿಡಿ 1 ಎಂದು ಗುರುತಿಸಲಾಯಿತು.** ದಾವಾ ಒಂದನೇ ಸ್ವತ್ತಿನ **1975-1976 ರಿಂದ 1981-1982 ನೇ** ಸಾಲಿನ ಕೈಬರಹದ ಪಹಣಿಯ ನಕಲನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನರಸಪ್ಪ ಹಾಗೂ ಪಡಾ ಎಂದು ನಮೂದು ಇದೆ ಎಂದು ಹೇಳಿದಾಗ ಸಾಕ್ಷಿ ಅದನ್ನು ನೋಡಿ ಪಡಾ ಎಂಬುದಾಗಿ ನಮೂದು ಇದೆ ಎಂದು ನುಡಿಯುತ್ತಾರೆ. ಆದ್ದರಿಂದ ಆ

ದಾಖಲೆಯನ್ನು **ನಿಡಿ 2 ಎಂದು ಗುರುತಿಸಲಾಯಿತು.** ದಾವಾ ಒಂದನೇ ಸ್ವತ್ತಿನ ರೆಕಾರ್ಡ್ ಆಫ್ ರೈಟ್ಸ್ ನ ನಕಲನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನರಸಿಂಹೇಗೌಡ ಎಂಬ ಹೆಸರು ನಮೂದು ಇದೆ ಎಂದು ಹೇಳಿದಾಗ ಸಾಕ್ಷಿ ಅದನ್ನು ನೋಡಿ ನರಸಿಂಹೇಗೌಡ ಹಾಗೂ ಪಡಾ ಎಂಬುದಾಗಿ ನಮೂದು ಇದೆ ಎಂದು ನುಡಿಯುತ್ತಾರೆ. ಆದ್ದರಿಂದ ಆ ದಾಖಲೆಯನ್ನು **ನಿಡಿ 3 ಎಂದು ಗುರುತಿಸಲಾಯಿತು.**

41. ದಾವಾ ಸ್ವತ್ತುಗಳು ಸದರಿ ನರಸಿಂಹೇಗೌಡರ ಹೆಸರಿನಲ್ಲಿ ಪಡಾ ನಿಂತಿದ್ದ ಆಸ್ತಿಗಳು ಅಂದರೆ ಸರಿ. ಆದ್ದರಿಂದ ನಾನು ಹೇಳುವಂತೆ ದಾವಾ ಸ್ವತ್ತುಗಳು ನಾಗಣ್ಣನ ಹೆಸರಿನಲ್ಲಿ ಪಡಾ ನಿಂತಿರಲಿಲ್ಲ ಅಂದರೆ ಸಾಕ್ಷಿ ಪಡಾ ನರಸಿಂಹೇಗೌಡರ ಹೆಸರಿನಲ್ಲಿ ನಿಲ್ಲಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ನರಸಿಂಹೇಗೌಡ ಹಾಗೂ ನಾಗಣ್ಣನ ಕುಟುಂಬಕ್ಕೆ ಪರಸ್ಪರ ಸಂಬಂಧ ಇಲ್ಲ ಅಂದರೆ ಸರಿ. ಆದ್ದರಿಂದ ದಾವಾ ಸ್ವತ್ತುಗಳು ನರಸಿಂಹೇಗೌಡರ ನಂತರದ ವಾರಸುದಾರರಾದ ನರಸಪ್ಪ, ಸಂಜೀವಯ್ಯ, ಚಿಕ್ಕನರಸೇಗೌಡ, ರಾಮೇಗೌಡ ಹಾಗೂ ಲಕ್ಷ್ಮಣಗೌಡರವರಿಗೆ ಸೇರಿದ್ದು ಅಂದರೆ ಸರಿಯಲ್ಲ. ಮೇಲೆ ಹೇಳಿದವರೆಲ್ಲಾ ಸದರಿ ನರಸಿಂಹೇಗೌಡರ ವಾರಸುದಾರರು ಅಂದರೆ ಸರಿ. ನಾಗಣ್ಣನಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇರಲಿಲ್ಲ ಅಂರೆ ಸರಿಯಲ್ಲ.

42. ಈರಮ್ಮ ಆ ಕುಟುಂಬಕ್ಕೆ ಮದುವೆ ಆಗಿ ಬಂದ ನಂತರ ಕಾನೂನುಬಾಹಿರವಾಗಿ ಅವರ ತಂದೆ ನಾಗಣ್ಣನ ಹೆಸರಿನಲ್ಲಿ ಪಡಾ ರೆಸ್ಟೋರ್ ಮಾಡಿಸಿದರು ಅಂದರೆ ಅವಾಗ ಮಾಡಿಸಿಲ್ಲ ಎಂದು ನುಡಿಯುತ್ತಾರೆ. **1988** ರಲ್ಲಿ ಪಡಾ ರೆಸ್ಟೋರ್ ಗೆ ಅರ್ಜಿ ಸಲ್ಲಿಸಿ **1994** ರಲ್ಲಿ ಪಡಾ ರೆಸ್ಟೋರ್ ಆಗಿದೆ. **1988** ರಿಂದ **1994** ರ ಅವಧಿಯಲ್ಲಿ ದಾವಾ ಸ್ವತ್ತುಗಳು ನಾಗಣ್ಣನ ಹೆಸರಿನಲ್ಲಿದ್ದ ಬಗ್ಗೆ ನಾನೇನೂ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಸ್ವತಃ ಅವರ ಹೆಸರಿನಲ್ಲಿ ಇರದಿದ್ದರೆ ಪಡಾ ರೆಸ್ಟೋರ್ ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಈರಮ್ಮಸಲ್ಲಿಸಿದ ಅರ್ಜಿ ಕಾನೂನುಬಾಹಿರ ಅರ್ಜಿ ಅಂದರೆ ಅವರ ತಂದೆಗೆ ಸಂಬಂಧಪಟ್ಟ ಆಸ್ತಿ ಆಗಿರುವುದರಿಂದ ಕಾನೂನುಬಾಹಿರವಲ್ಲ ಎಂದು ನುಡಿಯುತ್ತಾರೆ.

43. ನರಸಿಂಹೇಗೌಡರ ವಾರಸುದಾರರ ಹಕ್ಕಿನ ಸ್ವತ್ತು ಆಗಿರುವುದರಿಂದ ನನಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಹಾಗೂ ಸ್ವಾಧೀನ ಇಲ್ಲ ಅಂದರೆ ಸರಿಯಲ್ಲ. ನಾನು ಮತ್ತು **1 ನೇ** ಪ್ರತಿವಾದಿ ಶಾಮೀಲಾಗಿ ತಹಶೀಲ್ದಾರ್ ರ ಮುಂದೆ ಆಸ್ತಿ ಕಬಳಿಸಲು ಅರ್ಧ ಅರ್ಧ ಖಾತೆ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ 1 ನೇ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಅಂದರೆ ಸಾಕ್ಷಿ ನನಗೆ ಗೊತ್ತಾಗದ ರೀತಿಯಲ್ಲಿ ಮೃತ 4 ನೇ ಪ್ರತಿವಾದಿಗೆ ನನಗೆ ಗೊತ್ತಿಲ್ಲದ ರೀತಿಯಲ್ಲಿ ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿದ್ದೇನೆ ಅಂದರೆ ಸರಿ. ಅದರ ಸಂಖ್ಯೆ 24560/97 ಎಂದರೆ ನಾನೇ ಹಾಕಿದ್ದು ಎಂದು ನುಡಿಯುತ್ತಾರೆ. ಆ ರಿಟ್ ಅರ್ಜಿಯಲ್ಲಿ ತಹಶೀಲ್ದಾರ್ ಗೆ ಪುನರ್ ಪರಿಶೀಲನೆ ಮಾಡಲು ಆದೇಶ ಮಾಡಿರುತ್ತಾರೆ.

44. ಮಾನ್ಯ ಉಚ್ಚ ನ್ಯಾಯಾಲಯ ನರಸಿಂಹೇಗೌಡರ ಹೆಸರಿನಲ್ಲಿ ಖಾತೆ ಮುಂದುವರೆಸಲು ನಂತರ ಪುನರ್ ಪರಿಶೀಲನೆ ಮಾಡಿ ಎಂದು ಆದೇಶ ಮಾಡಿರುವುದು ಅಂದರೆ ಸರಿ. ನಂತರ ತಹಶೀಲ್ದಾರ್ ನ್ಯಾಯಾಲಯದಲ್ಲಿ ಮರು ವಿಚಾರಣೆ ಆದಾಗ ನರಸಿಂಹೇಗೌಡರ ಎಲ್ಲಾ ವಾರಸುದಾರರಿಗೆ ನೋಟೀಸ್ ಜಾರಿ ಮಾಡಿಸಿಲ್ಲ ಅಂದರೆ ಸಾಕ್ಷಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ 1ನೇ ಪ್ರತಿವಾದಿ ಆಸ್ತಿ ಕಬಳಿಸುವ ಉದ್ದೇಶದಿಂದ ಎಲ್ಲಾ ವಾರಸುದಾರರಿಗೆ ನೋಟೀಸ್ ಮಾಡಿಸದೇ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವುದು ಅಂದರೆ ಸರಿಯಲ್ಲ. ಆದ್ದರಿಂದ ಈರಮ್ಮನ ಹೆಸರಿನಲ್ಲಿ ಆಗಿರುವ ಪೌತಿ ಖಾತೆ ಮೂಲ ನಾಗಣ್ಣನಿಗೆ ಹಕ್ಕು ಇಲ್ಲದೇ ಇರುವುದರಿಂದ ಆ ಖಾತೆ ಕಂದಾಯ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡ ಸುಳ್ಳು ದಾಖಲೆ ಅಂದರೆ ಸರಿಯಲ್ಲ.

45. ಆದ್ದರಿಂದ ಈರಮ್ಮನವರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಿಲ್ ನನ್ನ ಹೆಸರಿಗೆ ಬರೆಯಲು ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಇವತ್ತಿಗೂ ಸಹ ನರಸಿಂಹೇಗೌಡರ ವಾರುಸದಾರರು ಸ್ವಾಧೀನದಲ್ಲಿದ್ದು ನಾವು ಸ್ವಾಧೀನದಲ್ಲಿದ್ದೇವೆಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಆಸ್ತಿ ಹೊಡೆಯಲು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲದೇ ಇರುವುದರಿಂದ ದಾವಾ ಪರಿಹಾರ ಕೇಳಲು ನನಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ.

ಪ್ರತಿವಾದಿ 1 ರಿಂದ 3ರವರು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡಾ ಸಮಯಾವಕಾಶ ಕೇಳಿರುವುದರಿಂದ ಖರ್ಚು ಸಮೇತ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.